ಶ್ರೀ ಆರ್. ಅಶೋಕ: ಉತ್ತರವನ್ನು ಓದುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ: ಈ ವಿಚಾರವಾಗಿ ಮಾನ್ಯ ಸದಸ್ಯರು ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತದೆ ಎಂದು ಏನು ಆತಂಕ ವ್ಯಕ್ತಪಡಿಸಿದ್ದಾರೆ, ಕೆಲವೊಂದು ಮನವಿಗಳೂ ಕೂಡ ಬಂದಿದೆ. ಆ ಹಿನ್ನೆಲೆಯಲ್ಲಿ ನಾನು ಸ್ಪಷ್ಟವಾಗಿ ಹೇಳವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರೊಡನೆ ಚರ್ಚೆ ಮಾಡಿ ಇದಕ್ಕೆ ನಿರ್ದಿಷ್ಟವಾದಂತಹ ಒಂದು ಕಾನೂನು ತರುವಂತಹ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವುದು.

9. ವಿಷಯ: ನಿಗಮಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಆಯ್ಕೆ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಗಮ ಮಂಡಳಿ ಅದರಲ್ಲಿಯೂ ಪ್ರಮುಖವಾಗಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಜಾಗೃತಿ ಸಮಿತಿ, ಫಲಾನುಭವಿಗಳ ಆಯ್ಕೆ, ಕಾಲೇಜು ಕಮಿಟಿ ಏನಿವೆ ಇವುಗಳಿಗೆ ರಾಜಕೀಯೇತರ ಸದಸ್ಯರುಗಳನ್ನು ನೇಮಕ ಮಾಡುವುದು ಎಂದು ಮಾಡಲಾಗಿದೆ. ಇಲ್ಲಿಯವರೆಗೂ ಯಾವ ಸರ್ಕಾರವೂ ಈ ರೀತಿ ಸಂಪ್ರದಾಯ ಮಾಡಿಲ್ಲ. ಹೊಸದಾಗಿ ಶಾಸಕರುಗಳ ಅಧ್ಯಕ್ಷತೆಯಲ್ಲಿ ಎಂದು ಒಂದು ಕಡೆ ಹೇಳುವುದು ಮತ್ತು ಅದರ ಜೊತೆಗೆ 8–10 ಜನ ರಾಜಕೀಯೇತರ ಸದಸ್ಯರುಗಳನ್ನು ಸೇರಿಸುವುದು. ಉಸ್ತುವಾರಿ ಮಂತ್ರಿಗಳು ಅದಕ್ಕೆ ಅಧಿಕಾರ ತೆಗೆದುಕೊಳ್ಳುವುದು. ಇದರಿಂದ ಅಲ್ಲಿ ಯಾವುದೇ ಫಲಾನುಭವಿಗಳ ಆಯ್ಕೆಯಾಗುವುದಿಲ್ಲ ಇದಲ್ಲದೇ ಕೆಲಸ ಸಹ ಆಗುವುದಿಲ್ಲ. ಒಂದು ಕಡೆ ಶಾಸಕರಿಗೆ ಅಧಿಕಾರವನ್ನು ಕೊಟ್ಟು, ಮತ್ತೊಂದು

ಕಡೆ ಶಾಸಕರ ಅಧಿಕಾರವನ್ನು ಕಸಿದುಕೊಳ್ಳುವುದು ಸರಿಯಲ್ಲ. ಅದಕ್ಕಾಗಿ ಈ ರೀತಿ ಸದಸ್ಯರನ್ನು ನೇಮಕ ಮಾಡುವುದನ್ನು ದಯವಿಟ್ಟು ನಿಲ್ಲಿಸಿ. ಇದರಿಂದ ಮತ್ತೆ ಯಾವುದೇ ಕೆಲಸ ಆಗುವುದಿಲ್ಲ ಮತ್ತು ಎಲ್ಲಾ ಶಾಸಕರ ಹಕ್ಕನ್ನು ಮೊಟಕುಗೊಳಿಸುವಂಥದ್ದು ಆಗುತ್ತದೆ. ಇದಕ್ಕೆ ಯಾರಾದರೂ ಸಚಿವರು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರ ನೀಡುತ್ತಾರಾ?

ಅಧ್ಯಕ್ಷರು: ಅವರಿಗೆ ಈ ವಿಷಯ ಬರುವುದಿಲ್ಲ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ಒಂದು ನಿರ್ಣಯ ಮಾಡಿ. ಯಾರಿಗೆ ಸಂಬಂಧಪಡುತ್ತದೆ ಅವರಿಂದ ಉತ್ತರ ಕೊಡಿಸಿ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಡಿಗ್ರಿ ಕಾಲೇಜಿನ SDMC ಕಮಿಟಿಯಲ್ಲಿಯೂ ಅದೇ ರೀತಿ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರ, ಆರ್.ಡಿ.ಪಿ.ಆರ್. ಸಮಿತಿಯೂ ಕೂಡ ಇಷ್ಟೇ ಗೊಂದಲಮಯವಾಗಿದೆ.

(ಗೊಂದಲ)

ಅಧ್ಯಕ್ಷರು: ಈ ಪ್ರಶ್ನೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಹೇಗೆ ಬರುತ್ತದೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರಿಗೂ ಈ ಪ್ರಶ್ನೆ ಸಂಬಂಧಪಡುತ್ತದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರೆ, ನಿಮ್ಮ ಹತ್ತಿರ ಉತ್ತರ ಇದ್ದರೆ ಹೇಳಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ವ್ಯಾಪ್ತಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಲು ಶಾಸಕರ ಅಧ್ಯಕ್ಷತೆಯಲ್ಲಿ ಯಾವುದೇ ಸಮಿತಿಗಳನ್ನು ರಚಿಸಿರುವುದಿಲ್ಲ. ಪಡಿತರ ಚೀಟಿ ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಪಡಿತರ ನೀಡುವ ಉದ್ದೇಶಕ್ಕಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಯಾವುದೇ ಹಂತದಲ್ಲಿ ಸಮಿತಿ ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ, ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಯಾವುದೇ ಸಮಿತಿ ನಮ್ಮಲ್ಲಿ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಫಲಾನುಭವಿಗಳ ಆಯ್ಕೆ ಬಗ್ಗೆ ಹೇಳುತ್ತಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಯಾವುದನ್ನೂ ಕೂಡ ಮಾಡಿಲ್ಲ. ಜಾಗೃತ ಸಮಿತಿ ಎಂದು ಒಂದೊಂದು ಅಂಗಡಿಗೆ ಐದು ಜನ ನೇಮಿಸಬೇಕೆಂದು ಮಾಡಿದ್ದೇವೆ. ಪ್ರತಿ ಅಂಗಡಿಗೆ ನಾವು ಶಾಸಕರನ್ನು ಅಧ್ಯಕ್ಷತೆ ಮಾಡುವುದಕ್ಕೆ ಆಗುವುದಿಲ್ಲ. ಒಂದೊಂದು ನ್ಯಾಯ ಬೆಲೆ ಅಂಗಡಿಗೆ ಐದು ಜನರ ಜಾಗೃತಿ ಸಮಿತಿ ಮಾಡಿದ್ದೇವೆ. ಅಂದರೆ ಪ್ರತಿ ಐದು ಜನ ಜಾಗೃತಿ ಸಮಿತಿಗೆ ನಾವು ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವುದಕ್ಕೆ ಆಗುತ್ತದೆಯೇ? ಸುಮಾರು 20,000 ಅಂಗಡಿಗಳು ಇವೆ. ಅದಕ್ಕೋಸ್ಕರ ಖಂಡಿತವಾಗಿಯೂ ಇದು ಅನ್ವಯಿಸುವುದಿಲ್ಲ. ಯಾವುದೇ ರೀತಿಯ ದುರುದ್ದೇಶ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ಸಂಬಂಧಿಸಿದಂತೆ order ಇದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಜಾಗೃತ ಸಮಿತಿ ಮಾಡಿದ್ದೀರಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ತಾಲ್ಲೂಕುವಾರು ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾಡಿದ್ದೀರಿ, ಜಿಲ್ಲಾ ಜಾಗೃತ ಸಮಿತಿ, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಾಗೃತ ಸಮಿತಿ ಮಾಡಿದ್ದೀರಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಜಿಲ್ಲಾ ಸಮಿತಿ ಮತ್ತು ನ್ಯಾಯಬೆಲೆ ಅಂಗಡಿ ಮಟ್ಟದ ಸಮಿತಿ. ತಾಲ್ಲೂಕು ಸಮಿತಿಗಳು ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಯೂ ಈ ಶಾಸಕರುಗಳನ್ನು ಬಿಟ್ಟು ಉಳಿದವರನ್ನು ಸದಸ್ಯರನ್ನಾಗಿ ಮಾಡುವುದು ಆಗುತ್ತಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜಿಲ್ಲಾ ಪಂಚಾಯಿತಿಯವರು, ಜಿಲ್ಲಾ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವರುಗಳು ಇರುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Orderನಲ್ಲಿ, 'ಜಿಲ್ಲಾ ಮಟ್ಟದ ಜಾಗೃತ ಸಮಿತಿಗಳನ್ನು ಈ ಕೆಳಕಂಡಂತೆ ಪುನರ್‌ರಚಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ನ್ಯಾಯಬೆಲೆ ಅಂಗಡಿ ಮತ್ತು ಜಿಲ್ಲಾ ಮಟ್ಟದ ಜಾಗೃತ ಸಮಿತಿಗಳಿಗೆ ಸರ್ಕಾರೇತರ ಸದಸ್ಯರುಗಳ ಹೆಸರುಗಳನ್ನು ಶಿಫಾರಸ್ಸು ಮಾಡತಕ್ಕದ್ದು.' ಎಂದು ಇದೆ. ಇದು ಹೊಸದಾಗಿ ಬಂದಿರುವುದು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಚರ್ಚೆ ಬೇಡ. ನಮ್ಮ ಸರ್ಕಾರದಲ್ಲಿ ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಒಂದು ಜಾಗೃತಿ ಸಮಿತಿ ಇರಬೇಕು ಅದಕ್ಕೆ ಐದು ಜನರನ್ನು ನೇಮಿಸುತ್ತಿದ್ದೇವೆ. ಸ್ಥಳೀಯರು ಅಲ್ಲಿ ಯಾರು ಒಳ್ಳೆಯ ಕೆಲಸ ಮಾಡಿರುತ್ತಾರೆ ಅವರನ್ನು ಅದಕ್ಕೆ ನೇಮಿಸುತ್ತೇವೆ. ಅದಕ್ಕೆ ಶಾಸಕರನ್ನು ಅಧ್ಯಕ್ಷರನ್ನಾಗಿ ಹೇಗೆ ಮಾಡುವುದಕ್ಕೆ ಆಗುತ್ತದೆ? ಹಿಂದಿನ ಸರ್ಕಾರದಲ್ಲಿ ಯಾವುದೇ ಜಾಗೃತಿ ಸಮಿತಿಯನ್ನೂ ಮಾಡಿರಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರಲ್ಲಿ ಒಂದು ವಿಷಯವೆಂದರೆ, ಈ ಕೆಲಸವನ್ನು ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳು ಸದಸ್ಯೀಕರಣ ಮಾಡುತ್ತಿದ್ದರು. ಈಗ ಗ್ರಾಮ ಪಂಚಾಯಿತಿಗಳ ಅಧಿಕಾರ ಮೊಟಕು ಆಯಿತು. ರೇಷನ್ ಅಂಗಡಿಗಳು ರಾಜಕಾರಣ ಮಾಡುವಂತಹ ಕೇಂದ್ರವಾಯಿತು.

(ಗೊಂದಲ)

ಅಧ್ಯಕ್ಷರು: ಸಾಕು, ಗಮನಸೆಳೆಯುವ ಸೂಚನೆಗೆ ಇಷ್ಟೊಂದು ದೊಡ್ಡ ರಗಳೆ ಮಾಡಿಕೊಂಡರೆ ನಡೆಸುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ದೇವರಾಜ ಅರಸು ನಿಗಮ, ಮಂಡಳಿಗಳಲ್ಲಿಯೂ ಸಹ ಫಲಾನುಭವಿಗಳ ಆಯ್ಕೆಯಲ್ಲಿ ಈ ರೀತಿ ಸರ್ಕಾರೇತರ ಸದಸ್ಯರನ್ನು ನೇಮಕ ಮಾಡುವುದನ್ನು ಹೊಸದಾಗಿ ಪ್ರಾರಂಭ ಮಾಡಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾಲೇಜು ಸಮಿತಿಗಳನ್ನೂ ಇದೇ ರೀತಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಆಯ್ಕೆ ಮಾಡುವುದರಲ್ಲಿ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈಗ ಅದು ಹೋಯಿತು.

(ಗೊಂದಲ)

ಅಧ್ಯಕ್ಷರು: ಮೊದಲು ಇತ್ತು ಅಲ್ಲವೇ? ಆಗ ಒಬ್ಬರೋ ಇಬ್ಬರನ್ನು ಹಾಕುತ್ತಿರಲಿಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲ ಹಾಕುತ್ತಿರಲಿಲ್ಲ. ಕೇವಲ ಶಾಸಕರುಗಳು ಹಾಗೂ ಅಧಿಕಾರಿಗಳು ಮಾತ್ರ ಇದ್ದರು.

(ಗೊಂದಲ)

ಅಧ್ಯಕ್ಷರು: ಆಯಿತು, ಮಾನ್ಯ ಸಚಿವರೆ, ಉತ್ತರ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಆರ್.ಡಿ.ಪಿ.ಆರ್. ಸಚಿವರು ಹೆಚ್.ಕೆ. ಪಾಟೀಲ್‌ರವರು ಇದ್ದಾರೆ. ಅವರು ಹೇಳಬೇಕು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆ, ಹೆಚ್ಚಿಗೆ ಚರ್ಚೆ ಮಾಡುವಂಥದ್ದು ಅಲ್ಲ. ಆರ್.ಡಿ.ಪಿ.ಆರ್. ಇಲಾಖೆ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರುಗಳು ಏನು ಉತ್ತರ ಹೇಳುತ್ತಾರೋ ಕೇಳಿ. ಅದಕ್ಕಿಂತ ನಾವು ಹೆಚ್ಚಿಗೆ ಏನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ರಸ್ತೆ ಅಭಿವೃದ್ಧಿಗೆ ಶಾಸಕರ ಅಧ್ಯಕ್ಷತೆಯಲ್ಲಿ ರಸ್ತೆ ನಿರ್ವಹಣೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಆ ವಿಷಯ ಬೇಡ. ಇದಕ್ಕೆ ಸಂಬಂಧಿಸಿದಂತೆ ಕೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಎಲ್ಲ ಸಮಿತಿಗಳಲ್ಲಿಯೂ ಹೀಗೆಯೇ ನಮ್ಮ ಅಧಿಕಾರ ಮೊಟಕಾಗುತ್ತಿದೆ.

(ಗೊಂದಲ)

ಅಧ್ಯಕ್ಷರು: ನೀವು ಹೇಳುವುದನ್ನು ಹೇಳಿ, ಮಾನ್ಯ ಸಚಿವರು ಏನು ಉತ್ತರ ಹೇಳುತ್ತಾರೆ ಕೇಳಿ.

(ಗೊಂದಲ).

ಶ್ರೀ ಗೋವಿಂದ ಎಂ. ಕಾರಜೋಳ: ಎಸ್.ಸಿ/ಎಸ್.ಟಿ ಜನಾಂಗಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ, ಗಂಗಾ ಕಲ್ಯಾಣ ಇರಬಹುದು, ನೇರ ಸಾಲ ಇರಬಹುದು, ಸ್ವಯಂ ಉದ್ಯೋಗ ಇರಬಹುದು, ಆ ಎಲ್ಲಾ ಯೋಜನೆಗಳಿಗೆ non-official members ಅನ್ನು ಆಯ್ಕೆ ಮಾಡುವುದಕ್ಕೆ ಸಮಿತಿಯೊಳಗೆ ಹಾಕಿದ್ದೀರಿ. ಮೊದಲು ಏನು ಪದ್ಧತಿ ಇತ್ತೆಂದರೆ, ಕೇವಲ ಶಾಸಕರು ಮತ್ತು ಅಧಿಕಾರಿಗಳು ಇರುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, 5–6 ಜನರನ್ನು ಮತ್ತೆ ಕಮಿಟಿಗೆ memberಗಳನ್ನಾಗಿ ಮಾಡಿದ್ದೀರಿ. ಇದರಿಂದ ಏನಾಗುತ್ತದೆ ಎಂದರೆ ನಿಜವಾದ ಬಡವರಿಗೆ ನಾವು ಆಯ್ಕೆ ಮಾಡುವುದಕ್ಕೆ ಆಗುವುದಿಲ್ಲ. ಗ್ರಾಮ ಪಂಚಾಯಿತಿಯಿಂದ ಮನೆ

ಕೊಡಬೇಕಾದರೆ ಯಾವ ರೀತಿ ಗ್ರಾಮ ಪಂಚಾಯಿತಿ ಸದಸ್ಯರುಗಳು ಹಂಚಿಕೊಳ್ಳುತ್ತಿದ್ದಾರೆ ಅದೇ ರೀತಿ ಮುಂದೆಯೂ ಆಗುತ್ತದೆ.

(ಗೊಂದಲ)

ಅಧ್ಯಕ್ಷರು: ಈ ವ್ಯವಸ್ಥೆಯನ್ನು ತಪ್ಪಿಸಬೇಕೆಂದು ತಾವು ಹೇಳುತ್ತಿದ್ದೀರಿ ಅಲ್ಲವೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಹೌದು. ಈ ವ್ಯವಸ್ಥೆಯನ್ನು ತಪ್ಪಿಸಬೇಕು. ಅವರನ್ನು ಸೇರಿಸಬಾರದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ದಯವಿಟ್ಟು ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಎಂ. ರಾಜಣ್ಣ: ಗ್ರಾಮ ಪಂಚಾಯಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ ಗ್ರಾಮ ಪಂಚಾಯಿತಿ ಸದಸ್ಯರುಗಳು ನನಗೆ ನಿನಗೆ ಎಂದು ಹಂಚಿಕೊಳ್ಳುತ್ತಾರೆ. ಇದೂ ಅದೇ ರೀತಿ ಆಗುತ್ತದೆ. ಯಾವುದೂ ಕಾರ್ಯಗತವಾಗುವುದಿಲ್ಲ. ಕೇವಲ ಜಗಳಗಳು ಆಗುತ್ತವೆ ಅಷ್ಟೆ.

(ಗೊಂದಲ)

ಅಧ್ಯಕ್ಷರು: ಆಯಿತು, ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರ ನೀಡುತ್ತಾರೆ, ಕೇಳಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಗ್ರಾಮ ಪಂಚಾಯಿತಿಯ ಮರ್ಯಾದೆಯನ್ನು ತೆಗೆಯಬೇಡಿ. ಗ್ರಾಮ ಪಂಚಾಯಿತಿ member ಯಾರೋ ಏನೋ

ಮಾಡಿರುತ್ತಾರೆ ಎಂದರೆ ಎಲ್ಲರೂ ಅಂತಹವರು ಇಲ್ಲ. ನಿಸ್ವಾರ್ಥತೆಯಿಂದ ಕೆಲಸ ಮಾಡಿಕೊಂಡು ಹೋಗುವ ಗ್ರಾಮ ಪಂಚಾಯಿತಿಯವರು ಇದ್ದಾರೆ.

(ಗೊಂದಲ)

ಅಧ್ಯಕ್ಷರು: ಇದಕ್ಕೆ ಸಂಬಂಧಿಸಿದಂತೆ ಉತ್ತರ ನೀಡಿ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ದಲ್ಲಾಳಿಗಿರಿ ಪ್ರಾರಂಭವಾಗುತ್ತದೆ. ದಲ್ಲಾಳಿಗಳಿಗೆ ಅವಕಾಶವಾಗುತ್ತದೆ ಅಷ್ಟೆ. ನಿಮ್ಮ ಬಗ್ಗೆ ಗೌರವವಿದೆ. ದಲ್ಲಾಳಿಗಳನ್ನು ಸೃಷ್ಟಿ ಮಾಡಿದಂತೆ ಆಗುತ್ತದೆ, ಆದ್ದರಿಂದ ಈ ವಿಚಾರ ದಯಮಾಡಿ ಅದು ಬೇಡ.

(ಗೊಂದಲ)

ಶ್ರೀ ಹೆಚ್.ಆಂಜನೇಯ: ಮಾನ್ಯ ಅಧ್ಯಕ್ಷರೆ, ಶಾಸಕರ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ನಿಗಮಗಳಿಂದ ಕೊಡುವಂತಹ ಸಾಲ ಸೌಲಭ್ಯ, ಗಂಗಾ ಕಲ್ಯಾಣ ಯೋಜನೆಗಳು ಏನಿವೆ ಗೌರವಾನ್ವಿತ ಶಾಸಕರುಗಳ ಅಧ್ಯಕ್ಷತೆಯಲ್ಲಿ ಅದು ನೆರವೇರುತ್ತದೆ. ನಾನು 15 ವರ್ಷದ ಒಂದು ಸಮೀಕ್ಷೆ ಮಾಡಿಸಿದೆ. ನಾನು ಒಂದು ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿರತಕ್ಕವನು, ಮಾದಿಗ ಸಮುದಾಯಕ್ಕೆ ಸೇರಿರತಕ್ಕವನು. ನಾನು ಏನು ಮಾಡುತ್ತೇನೆಂದರೆ, ಕೇವಲ ನನ್ನ ಜಾತಿಯವರಿಗೆ ಕೊಟ್ಟಿದ್ದೇನೆ. ಬೇರೆ ಜಾತಿಯ interest ಕಾಪಾಡಿಲ್ಲ. ಒಬ್ಬರು ಲಂಬಾಣಿ ಬರುತ್ತಾರೆ. ಅವರು ಲಂಬಾಣಿಯವರಿಗೆ ಕೊಡುವುದು. ಒಬ್ಬರು ಬೋವಿ ಜನಾಂಗದವರು ಬರುತ್ತಾರೆ ಅವರು ಪೂರ್ತಿ ಬೋವಿ ಜನಾಂಗದವರಿಗೇ ಕೊಡುವುದು.

(ಗೊಂದಲ)

ಅಧ್ಯಕ್ಷರು: ವಿಷಯಾಂತರ ಮಾಡಬೇಡಿ.

(ಗೊಂದಲ)

ಶ್ರೀ ಆರ್.ಅಶೋಕ: ಅದರಲ್ಲಿ ಯಾರಾರಿಗೆ ಎಷ್ಟೆಷ್ಟು ಕೊಡಬೇಕೆಂದು ಬರೆಸಿಬಿಡಿ. ಅದರಲ್ಲಿ ಬೋವಿಗಳಿಗೆ ಎಷ್ಟು ಕೊಡಬೇಕು, ಲಂಬಾಣಿಯವರಿಗೆ ಎಷ್ಟು ಕೊಡಬೇಕು ಎಂದು rules frame ಮಾಡಿ ಕೊಟ್ಟುಬಿಡಿ. ಅದಕ್ಕೆ ಸದಸ್ಯರುಗಳು ಏಕೆ ಬೇಕು?

(ಗೊಂದಲ) .

ಶ್ರೀ ಸಿ.ಎನ್. ಬಾಲಕೃಷ್ಣ: ನಾವು ಶಾಸಕರುಗಳು ವೋಟು ಹಾಕಿಸಿಕೊಳ್ಳುವವರು ಯಾರೂ ಆ ರೀತಿ ಕೊಡುವುದಕ್ಕೆ ಹೋಗುವುದಿಲ್ಲ ಮತ್ತೆ ಜೊತೆಯಲ್ಲಿ ಅಧಿಕಾರಿಗಳು ಇರುತ್ತಾರೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ಚುನಾವಣಾ ರಾಜಕಾರಣ ಮಾಡುವವರಿಗೆ ಎಲ್ಲವೂ ಬೇಕಾಗುತ್ತದೆ. ಈ ರೀತಿ ಯಾರೂ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಬೇರೆ ಕಥೆ ಬೇಡ. ಈಗ ಏನು ಮಾಡಬೇಕೆನ್ನುವುದನ್ನು ಮಾತ್ರ ಹೇಳಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಅವರ ಅಧ್ಯಕ್ಷತೆಯಲ್ಲಿ ಅವರಿಗೆ ಸಹಾಯಕವಾಗುವ ರೀತಿಯಲ್ಲಿ non-official ಸದಸ್ಯರನ್ನು ನೇಮಕ ಮಾಡುವಂತಹ ಒಂದು ಸಮಿತಿಯನ್ನು ಸಿದ್ಧ ಮಾಡಿದ್ದೇವೆ ಅದನ್ನು ನೇಮಕ ಮಾಡುತ್ತೇವೆ. ಅದರಿಂದ ಶಾಸಕರ ಘನತೆ, ಗೌರವಕ್ಕೆ ಯಾವುದೇ ರೀತಿಯ ಧಕ್ಕೆ ಆಗುವುದಿಲ್ಲ. ಅವರಿಗೆ ಬೆಂಬಲವಾಗಿ ಒಂದು ಸಮಿತಿ ಮಾಡಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವರು ಕಾಂಗ್ರೆಸ್ಸೀಕರಣ ಮಾಡಲು ಹೊರಟಿದ್ದಾರೆ. ದಯವಿಟ್ಟು ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಕಾಂಗ್ರೆಸ್ಸೀಕರಣ ಮಾಡಲು ಹೊರಟಿದ್ದಾರೆ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಅಶೋಕ್‌ರವರೆ, ದಯವಿಟ್ಟು ಎಲ್ಲರೂ resume ಮಾಡಿ, ತಾವು ಈ ರೀತಿಯಾಗಿ ಮಾಡಬೇಡಿ. ಇದು ಸರ್ಕಾರದ ತೀರ್ಮಾನವಾಗಿದೆ. ಈ ಬಗ್ಗೆ ಸರ್ಕಾರವು ಪುನರ್ ಪರಿಶೀಲನೆ ಮಾಡಲಿ ಎಂದು ತಾವು ಹೇಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಏತಕ್ಕಾಗಿ ಈ ರೀತಿ ಮಾಡುತ್ತಿದ್ದೀರಿ? ರಾಜ್ಯದಲ್ಲಿ ಬೇರೆ ಕಡೆಯಲ್ಲಿ ಎಲ್ಲಾ ಮೆಂಬರ್‌ಗಳು ಇರುವುದಿಲ್ಲ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ಆ ಆದೇಶವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು: ನಾನು ಹೇಗೆ ಹೇಳುವುದಕ್ಕೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಏನು ಹೇಳುತ್ತಾರೆ ಹೇಳಲಿ, ತಾವು ಈ ಬಗ್ಗೆ ಪುನರ್ ಪರಿಶೀಲನೆ ಮಾಡಿ ಎಂದು ಕೇಳಿ. ಆದರೆ ಇದು ಸರ್ಕಾರದ ಇಚ್ಛೆ. ಈ ಬಗ್ಗೆ ನಾವು ಏನು ಹೇಳುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು: ಈಗ ಎಲ್ಲಾ ಮಾನ್ಯ ಸದಸ್ಯರುಗಳು ದಯವಿಟ್ಟು ಕುಳಿತುಕೊಳ್ಳಿ. ನೋಡಿ time correct ಇದೆ. ವಿಪರೀತ Calling Attention

ಇದೆ. ರೂಲ್ 69 ಇದೆ. ಮಾನ್ಯ ಸಚಿವರೆ, ಈ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎ. ಮಂಜು: ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಈ ಸದನದ ಸದಸ್ಯರಾಗಿದ್ದೇವೆ. ಮಾನ್ಯ ಮಂತ್ರಿಗಳು ಈಗ ಒಂದು statement ಮಾಡಿದ್ದಾರೆ. ಬಹುಶ: ಇದನ್ನು ಯಾವುದೇ ಕಾರಣದಿಂದಲೂ ಹಿಂದೆ ಹೇಗಿತ್ತು ಆ ರೀತಿಯಾಗಿ ಮುಂದುವರೆಸಿಕೊಂಡು ಹೋಗುವುದು ಸೂಕ್ತವಾಗಿದೆ. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತೇನೆಂದರೆ ಯಾರೋ ಒಬ್ಬರನ್ನು ನಾಮನಿರ್ದೇಶನ ಮಾಡಿದರೆ ನಾವು ಶಾಸಕರುಗಳು ಅಲ್ಲಿಗೆ ಹೋಗಿ ಕುಳಿತುಕೊಂಡು ಮಾತನಾಡುವುದಕ್ಕೆ ಸಾಧ್ಯವಿಲ್ಲ. ಈಗ Rural Development ನಲ್ಲಿಯೂ ಸಹ ಮಾಡಿದ್ದಾರೆ. ಶಾಸಕರ ನೇತೃತ್ವದಲ್ಲಿಯೇ ಅದನ್ನು ಮಾಡಬೇಕೆಂದು ಹೇಳುವುದು ಇದು ಹಿಂದಿನಿಂದಲೂ ಇರುವಂತಹ ಪದ್ಧತಿಯನ್ನು ಯಾವುದೇ ಕಾರಣದಿಂದಲೂ ಮಾನ್ಯ ಮಂತ್ರಿಗಳಲ್ಲಿ ನಾನು ಬೇಡಿಕೊಳ್ಳುವುದು ಇಷ್ಟೇ, ಏನು ಇದೆ ಅದನ್ನು ಮುಂದುವರೆಸುವುದು ಈ ಬಾರಿ ಸೂಕ್ತವೆಂದು ನನ್ನ ಮನವಿ. ದಯವಿಟ್ಟು ತಾವು ಯಾವುದಾದರೂ ಬದಲಾವಣೆ ಮಾಡಬೇಕೆಂದು ಇಟ್ಟುಕೊಂಡಿದ್ದರೆ ಅದನ್ನು ಮಾಡುವುದಕ್ಕೆ ಹೋಗಬೇಡಿ. ಇದರ ಬಗ್ಗೆ ಎಲ್ಲರ ದೃಷ್ಟಿಯೂ ಒಂದೇ ಇದೆ. ಯಾರು ಯಾರೇ reservation ಇರಬಹುದು, ಅವರು ಏನೇ ಆಗಿರಬಹುದು. ಅವನು ಜಾತಿ ವರ್ಗಕ್ಕೆ ಅದನ್ನು ಕೊಟ್ಟವನೇ ಆದರೆ ಅವನು ಅಲ್ಲಿ ಅಪವಿತ್ರತೆಯನ್ನು ಕಳೆದುಕೊಳ್ಳುತ್ತಾನೆ. ಯಾವುದೇ ಕಾರಣದಿಂದಲೂ ಮಾಡುವುದಿಲ್ಲ. ಎಲ್ಲರೂ ಕೂಡ ರಾಜಕಾರಣವನ್ನೇ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಅದು ಹೇಗೆ ಇದೆಯೋ ಹಾಗೆಯೇ continue ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಪಿ. ಎಂ. ನರೇಂದ್ರಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸರ್ಕಾರದ ತೀರ್ಮಾನದ ಬಗ್ಗೆ ಹೇಳುತ್ತಿದ್ದಾರೆ. ಅದರಲ್ಲಿ ಒಂದು ಮಹತ್ತರವಾದಂತಹ ತಪ್ಪು ಏನು ಕಡತಕ್ಕೆ ಹೋಗಿದೆ ಅದನ್ನು ದಯವಿಟ್ಟು ತೆಗೆಯಿರಿ. ಏಕೆಂದರೆ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ

ಪ್ರತಿಯೊಬ್ಬ ಶಾಸಕನೂ ತನ್ನ ಆತ್ಮವನ್ನು ಮುಟ್ಟಿ ಮಾತನಾಡಬೇಕಾದಂತಹ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಆಯಾಯ ಜಾತಿ : ಉಪಜಾತಿಗೆ ಉಲ್ಲೇಖ ಮಾಡಿ ಮಾತನಾಡುವುದು ತಪ್ಪು. ಈ ಮೀಸಲಾತಿಯು ಆ ವರ್ಗಕ್ಕೆ ಯಾರ್ಯಾರನ್ನು ಅಳವಡಿಸಿದ್ದೇವೆ ಅವರೆಲ್ಲರಿಗೂ ಇದೆ. ಆದರೆ ಮಾನ್ಯ ಸಚಿವರು ಹೇಳಿರುವುದು, ಸನ್ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿರುವ ಮಾತು ನಿಮಗೆ ಅರ್ಥವಾಗುತ್ತಿಲ್ಲ. ನಾವು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಒಂದು ಉಪಜಾತಿಗೆ ಸೇರಿದ್ದೇನೆ. ಇನ್ನೊಂದು ಉಪಜಾತಿಗೆ ಸೇರಿದವರು ಅವರವರ ಉಪಜಾತಿಗೆ ಸೇರಿದವರಿಗೆ ಕೊಡುತ್ತಿದ್ದಾರೆ ಅನ್ನತಕ್ಕಂತಹ ಒಂದು ಮಾನದಂಡದ ಆಧಾರದ ಮೇಲೆ ಮಾತನಾಡುತ್ತಿದ್ದಾರಲ್ಲಾ, ಆ ತಪ್ಪನ್ನು ಏನಾದರೂ ವರದಿ ರೂಪದಲ್ಲಿ ಕೊಟ್ಟಿದ್ದಾರೆಯೇ? ಅಥವಾ ಯಾವ ಅರ್ಥದಲ್ಲಿ ಇವತ್ತು ಶಾಸಕರನ್ನು ಅವಮಾನ ಮಾಡುತ್ತಿದ್ದಾರೆ? ನಾವು ಆಡಳಿತ ಪಕ್ಷದ ಶಾಸಕರಾಗಿದ್ದರೂ ಕೂಡ ಇಂತಹ ಒಂದು ಪ್ರಮಾದವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಅದಕ್ಕೆ ಏನಾದರೂ ಮಾರ್ಗಸೂಚಿಯನ್ನು ಅವರು ಅಳವಡಿಸಲಿ. ಈ ರೀತಿಯಾಗಿ ಜನಸಂಖ್ಯೆ ಎಲ್ಲೆಲ್ಲಿ ಇದೆ, ಅಲ್ಲಲ್ಲಿ ಈ ಆಧಾರದ ಮೇಲೆ ಕೊಡಿ ಎನ್ನುವುದರ ಬಗ್ಗೆ ಒಂದು ಮಾರ್ಗಸೂಚಿಯನ್ನು ಕೊಡಲಿ. ಇಲ್ಲದೇ ಇರುವಂತಹ ಕಾನೂನನ್ನು ಒಡ್ಡಿ ಆ ಉಪಜಾತಿಗಳಲ್ಲಿ ಅಂತಃಕಲಹ ಬರುವಂತಹ ರೀತಿಯಲ್ಲಿ ಈ ತೀರ್ಮಾನವಾಗುವುದು ತಪ್ಪು ಎಂದು ನಾನು ಈ ಸದನದ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ತಾವು ಈ ಬಗ್ಗೆ ಪುನರ್ ಪರಿಶೀಲನೆ ಮಾಡುವುದಕ್ಕೆ ಅವಕಾಶವಿದೆಯೇ ನೋಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ನಾನು ಆಡಳಿತ ಪಕ್ಷದ ಶಾಸಕನಾಗಿದ್ದರೂ ಕೂಡ ಸನ್ಮಾನ್ಯ ಸಚಿವರು ವಿಚಾರವನ್ನು ಗಮನದಲ್ಲಿಟ್ಟುಕೊಂಡು ಏನು ಕೆಲವು ಬದಲಾವಣೆಯನ್ನು ತರುವುದಕ್ಕೆ ಹೊರಟಿದ್ದಾರೆ, ಅದರ ಬಗ್ಗೆ ಹೇಳಬಯಸುತ್ತೇನೆ. ಅವರ ಉದ್ದೇಶ ಸರಿ ಇದ್ದರೂ ಕೂಡ ಅದು ಏನಾಗುತ್ತದೆ ಎಂದರೆ ಒಂದು ವೇಳೆ ನೀವು ಬೇರೆ ಬೇರೆ ನಾಮನಿರ್ದೇಶನ ಮಾಡಿದರೆ ಅಲ್ಲಿ ಶಾಸಕರಿಗೆ ಗೌರವ ಇರುವುದಿಲ್ಲ,

ನಾವು ಯಾರಿಗೂ ಕೂಡ ನ್ಯಾಯಯುತವಾಗಿ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನೀವು ಕೊಡುವುದೇ 20–30 ರಷ್ಟನ್ನು ಕೊಟ್ಟಿರುತ್ತೀರಿ. ಇದಕ್ಕಾಗಿ ಒಂದು ಸಾವಿರ ಅರ್ಜಿಗಳು ಬಂದಿರುತ್ತದೆ. ಅದಕ್ಕಾಗಿ ನಾನು ದಯಮಾಡಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ ಬಗ್ಗೆ ಪುನರ್ ಪರಿಶೀಲನೆ ಮಾಡಿ ಅದನ್ನು ಶಾಸಕರಿಗೆ ಏನು ಮೊದಲು ಯಥಾಸ್ಥಿತಿಯಿತ್ತು ಆ ಯಥಾಸ್ಥಿತಿಯನ್ನೇ ಮುಂದುವರೆಸಬೇಕೆಂದು ತಮ್ಮ ಮೂಲಕ ನಾನು ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ: ಸನ್ಮಾನ್ಯ ಅಧ್ಯಕ್ಷರೆ, ಈಗ ಆಡಳಿತ ಪಕ್ಷದ ಸದಸ್ಯರುಗಳು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಎಲ್ಲರೂ ಹೇಳುತ್ತಿದ್ದಾರೆ ಆ circular ಅನ್ನು ಹಿಂದಕ್ಕೆ ತೆಗೆದುಕೊಂಡುಬಿಟ್ಟರೆ ಮುಗಿಯಿತು. ಆರ್.ಡಿ.ಪಿ.ಆರ್.ಗೆ ಸಂಬಂಧಪಟ್ಟಂತೆ ಆ ಇಲಾಖೆಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರೂ ಸಹ ಇದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಮಾಡಿದರೆ ಶಾಸಕರಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. ಇದು ಎಲ್ಲಾ ಇಲಾಖೆಯಲ್ಲಿಯೂ ನಡೆಯುತ್ತಿದೆ.

ಅಧ್ಯಕ್ಷರು: ಮಾನ್ಯ Law Minister ರವರೆ, ತಾವು ಈ ಬಗ್ಗೆ ನೋಡಿ, ಎಲ್ಲರೂ ಸೇರಿ ಈ ಬಗ್ಗೆ ಆಲೋಚನೆಯನ್ನು ಮಾಡಿ.

ಶ್ರೀ ಬಿ.ಆರ್. ಪಾಟೀಲ್: ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಅಲ್ಲ ಸರ್, ಇದು ಆರ್.ಡಿ.ಪಿ.ಆರ್. ಇಲಾಖೆಯಲ್ಲಿಯೂ ಸಹ ಮಾಡುತ್ತಿದಾರೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಈ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡುತ್ತೀರಾ? ತಾವು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಅವರ ಹತ್ತಿರ ಮಾತನಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಮಾತನಾಡಿ ಮಾಡುತ್ತೇನೆ.

ಅಧ್ಯಕ್ಷರು: ಆಯಿತು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಸಚಿವರೆ, ತಾವು ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆಯಿತು, ಈ ಬಗ್ಗೆ ಚರ್ಚೆ ಸಾಕು ಬಿಡಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇಡೀ ಸದನವೇ ಹೇಳುತ್ತಿದೆ.

ಅಧ್ಯಕ್ಷರು: ಆಯಿತು, ಈ ಬಗ್ಗೆ ಚರ್ಚೆ ಸಾಕು ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಆರ್.ಡಿ.ಪಿ.ಆರ್. ಇಲಾಖೆಯಲ್ಲಿಯೂ ಸಹ ಇದೆ.

ಅಧ್ಯಕ್ಷರು: ಮಾನ್ಯ ಕೆ.ಜಿ. ಬೋಪಯ್ಯನವರೆ ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರೂ ಸಹ ಸದನದಲ್ಲಿದ್ದಾರೆ. ಆರ್.ಡಿ.ಪಿ.ಆರ್. ಇಲಾಖೆಯಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಎಲ್ಲರನ್ನೂ ಸೇರಿಸಿ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಏನು ಕೆಲಸ ಯಾರು ಮಾಡುವುದಕ್ಕೆ ಆಗುತ್ತದೆ? ಯಾರಾದರೂ ಒಬ್ಬರನ್ನು ಮಾಡಿ. ಶಾಸಕರಿದ್ದರೆ ಶಾಸಕರನ್ನು ಮಾಡಿ.

ಅಧ್ಯಕ್ಷರು: ಈ ಬಗ್ಗೆ ಹೇಳಿದ್ದಾರಲ್ಲಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಆ ರಸ್ತೆಯ ನಿರ್ವಹಣೆಯ ನಿಧಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ.

ಅಧ್ಯಕ್ಷರು: ಆಯಿತು, ಮಾನ್ಯ ಸಚಿವರು ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಆರ್.ಡಿ.ಪಿ.ಆರ್. ಇಲಾಖೆಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರದು ಇದೆ. ಗ್ರಾಮೀಣ ರಸ್ತೆಯ ಸುಧಾರಣೆಯ ಬಗ್ಗೆ ಹೇಳಬೇಕು.

ಅಧ್ಯಕ್ಷರು: ಏತಕ್ಕೆ, ಅದು ಬೇಡ ಈ ವಿಚಾರಕ್ಕೆ ಬನ್ನಿ. ಮಾನ್ಯ ಬೋಪಯ್ಯನವರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪುನರ್ ಪರಿಶೀಲನೆ ಎಂದು ಮಾಡುವುದು ಬೇಡ. ಸದ್ಯ ಅದನ್ನು withdraw ಮಾಡಿಕೊಳ್ಳುತ್ತೇವೆಂದು ಹೇಳಲಿ, ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರದ ಬಗ್ಗೆ ಹೇಳುವುದೇನೆಂದರೆ, ಅರಸೀಕೆರೆಯಲ್ಲಿ ಒಂದು ಕಾಲೇಜು ಉಸ್ತುವಾರಿ ಸಮಿತಿಗೆ ಇಲ್ಲಿ ಯಾವ ತರಹ ಇದೆ ಎಂದರೆ, ಜಿಲ್ಲಾ ಉಸ್ತುವಾರಿ ಸಚಿವರು ನಡವಳಿಯ ಒಂದು ಲೆಟರ್ ಕಳುಹಿಸುತ್ತಾರೆ. 'ಶ್ರೀ ಬಿ. ಶಿವರಾಂ, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ (ಐ) ಹಾಸನ, ಇವರ ಪತ್ರವನ್ನು ಲಗತ್ತಿಸಿದೆ. ಅರಸೀಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿಗೆ ಈ ಕೆಳಕಂಡವರನ್ನು ಸದಸ್ಯರನ್ನಾಗಿ ನೇಮಕ ಮಾಡುವಂತೆ ಕೋರಿದೆ.' ಈ ಶಾಸಕರು ಏತಕ್ಕಾಗಿ ಇರಬೇಕು? ಈ ತರಹ ಆದರೆ ಶಾಸಕರು ಏತಕ್ಕೆ ಬೇಕು? ಇದು ಈ ಪರಿಸ್ಥಿತಿ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ಇದುವರೆಗೂ ಕಾಲೇಜುಗಳಲ್ಲಿ ಮತ್ತು ಹೈಸ್ಕೂಲ್‌ಗಳಲ್ಲಿ, ಜ್ಯೂನಿಯರ್ ಕಾಲೇಜುಗಳಲ್ಲಿ ಅಭಿವೃದ್ಧಿ ಸಮಿತಿ ಎಂದು ಮಾಡುತ್ತಾರೆ. ಅಲ್ಲಿಗೆ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಅದರ ಜೊತೆಗೆ ಬೇರೆಬೇರೆಯವರನ್ನು ಹಾಕಿರುತ್ತಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅದನ್ನು ಇವತ್ತು ಹೊಸದಾಗಿ ಏನೂ ಮಾಡಿರುವುದಿಲ್ಲ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ಈಗ ಉಸ್ತುವಾರಿ ಸಚಿವರು ಆ ಸಮಿತಿಯ ಸದಸ್ಯರನ್ನು ನೇಮಕ ಮಾಡುತ್ತಾರೆ.

ಅಧ್ಯಕ್ಷರು: ಅಧಿಕಾರದಲ್ಲಿದ್ದ ಪಕ್ಷದವರು ಅವರವರನ್ನು ಇಟ್ಟುಕೊಂಡು ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾಗೇರಿಯವರೆ, ನೀವು ಜಿಲ್ಲಾ ಸಮಿತಿಗೆ ಯಾರನ್ನು ನೇಮಕ ಮಾಡಿದ್ದೀರೆಂದು ನಾನು ಹೇಳಲೆ? ನೀವು ಜಿಲ್ಲಾ ಪಂಚಾಯಿತಿಗೆ ನಾಮನಿರ್ದೇಶನ ಮಾಡಿಲ್ಲವೇ?

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Higher Education, Social Welfare, Food and Civil Supplies Department, RDPR ಈ ನಾಲ್ಕು ಇಲಾಖೆಯವರು ಶಾಸಕರ ಅಧಿಕಾರವನ್ನು ಮೊಟಕುಗೊಳಿಸುವಂತಹ ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಸಚಿವರು ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನೀವು ಏನು ಬೇಕಾದರು ಮಾಡಿಕೊಳ್ಳಿ. ನಾನು adjourn ಮಾಡಿ ಹೋಗುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅದು ಆಗುವುದಿಲ್ಲ ಅಧ್ಯಕ್ಷರೆ, ಇದನ್ನು withdraw ಮಾಡಿಕೊಳ್ಳುತ್ತೇನೆಂದು ಅವರು ಹೇಳಲಿ.

ಅಧ್ಯಕ್ಷರು: ಈಗ ಕುಮಾರಸ್ವಾಮಿಯವರೆ, ಈಗ ಅವರದೊಂದು ಸರ್ಕಾರ ಇದೆ, ನೀವು ಹೇಳಿದ್ದೀರಿ.

(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಹಾಗು ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗಳಿದು ಧರಣಿ ನಿರತರಾದರು)

(ಗೊಂದಲ)

ಅಧ್ಯಕ್ಷರು: ನೀವು ಧರಣಿ ಮಾಡಿಕೊಂಡು ಕುಳಿತುಕೊಳ್ಳಿ, ನಾನು ಹೊರಡುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ: ಈಗ ಇದನ್ನು ವಾಪಸ್ಸು ತೆಗೆದುಕೊಳ್ಳಲಿ, ಮೊದಲು ಹಿಂದೆ ಹೇಗಿತ್ತು ಹಾಗೆಯೇ ನಡೆಯಲಿ. ಹಿಂದೆ ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಪಕ್ಷದ ಸರ್ಕಾರಗಳು ಇದ್ದಾಗ ಯಾವ ರೀತಿ ಇತ್ತೋ ಹಾಗೇ ಮಾಡಿ.

(ಗೊಂದಲ)

ಅಧ್ಯಕ್ಷರು: ಆಯಿತು, ಬೋಪಯ್ಯನವರೆ, ಮಾತನಾಡುತ್ತೀರಾ, ಇಲ್ಲವೇ?

ಶ್ರೀ ಜಗದೀಶ್ ಶೆಟ್ಟರ್: ನೀವು ಈ ರೀತಿ ತೆಗೆದುಕೊಂಡು ಬಂದರೆ ಇದರಲ್ಲಿ ಯಾವುದೇ ಫಲಾನುಭವಿಗಳು selection ಆಗುವುದಿಲ್ಲ.

ಅಧ್ಯಕ್ಷರು: ಆಗದಿದ್ದರೆ ಬಿಡಿ, adjourn ಮಾಡಿ ಹೋಗುತ್ತೇನೆ.

(ಗೊಂದಲ)

ಅಧ್ಯಕ್ಷರು: ನೀವು ಅಪೀಲ್ ಮಾಡಿದ್ದೀರಿ, ಅದರ ಪ್ರಕಾರ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಹೇಳಿದ್ದೇನೆ, ಅವರು ಪುನರ್ ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದವರ ಜೊತೆ ಚರ್ಚೆ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯೂ ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ. ಆಯಿತು, ನೀವು ಏನಾದರೂ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಶೆಟ್ಟರ್‌ರವರೆ, ಸ್ವಲ್ಪ ತಾಳಿ, ಎಲ್ಲಾ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದಾಗ ಹೀಗೆ ಮಾಡುವುದು. ಈ ಬಗ್ಗೆ ನನಗೇನೂ ಗೊತ್ತಿಲ್ಲವೇ? ಸುಮ್ಮನಿರಿ, ಅದಕ್ಕೆ ಶೆಟ್ಟರ್‌ರವರೆ, ಸಚಿವರು ಹೇಳಿದ್ದಾರೆ, ನಿಮ್ಮ ಜೊತೆಯಲ್ಲಿ ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ಅಶೋಕ: ಅಧ್ಯಕ್ಷರೆ, 2004 ರಲ್ಲಿ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವ ರೀತಿ ಇತ್ತು, ಅದೇ ರೀತಿ ಮಾಡಲಿ.

ಅಧ್ಯಕ್ಷರು: ಶೆಟ್ಟರ್‌ರವರೆ, ನಾನು ಸಮಾಜ ಕಲ್ಯಾಣ ಸಚಿವನಾಗಿದ್ದೆನು. ಈ ಗಂಗಾ ಕಲ್ಯಾಣ ಹಂಚಿಕೆ ಮಾಡುವ ವಿಚಾರದಲ್ಲಿ ಕೇವಲ ಒಂದು ಕಮಿಟಿ ಮಾಡಬೇಕೆಂದು ಇದ್ದೆನು, ಸದನದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಬೇಕೆಂದು ಎಲ್ಲರೂ ಒತ್ತಾಯ ಮಾಡಿದರು. ಆಯಿತು ಎಂದು ಶಾಸಕರ ಅಧ್ಯಕ್ಷತೆಯಲ್ಲಿ ಆ ಕಮಿಟಿಯನ್ನು ಮಾಡಿದರು.

(ಗೊಂದಲ)

ಶ್ರೀ ಆರ್. ಅಶೋಕ್: ಆಡಳಿತ ಪಕ್ಷದ ಸದಸ್ಯರು ಬೇಡವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಆ ತರಹ ಹೇಳುವುದಕ್ಕೆ ಬರುವುದಿಲ್ಲ. ನಾನು ಇದ್ದಾಗಲೇ ಆ ಕಮಿಟಿ ಮಾಡಿರುವುದು.

(ಗೊಂದಲ)

ಶ್ರೀ ಆರ್. ಅಶೋಕ್: ಶಾಸಕರ ಅಧಿಕಾರವನ್ನು ಮೊಟಕುಗೊಳಿಸುವ ಸರ್ಕಾರಕ್ಕೆ ಧಿಕ್ಕಾರ ಹೇಳುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್: ಕಾಂಗ್ರೆಸ್‌ನವರೇ ಇದಕ್ಕೆ ವಿರೋಧವಾಗಿದ್ದಾರೆ, ಸರ್.

(ಗೊಂದಲ).

ಅಧ್ಯಕ್ಷರು: ಒಂದು ನಿಮಿಷ, ಕಾನೂನು ಸಚಿವರು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಅವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಇವರ ಆತಂಕಗಳೇನಿವೆ ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಧರಣಿ ಮಾಡುತ್ತಾ ಕುಳಿತರೆ ಹೇಗಾಗುತ್ತದೆ?

(ಗೊಂದಲ)

ಅಧ್ಯಕ್ಷರು: ನಮ್ಮ ಗೃಹ ಸಚಿವರು ಶ್ರೀ ಮಲ್ಲಿಕಾರ್ಜುನ ಬಂಡೆ, ಪಿಎಸ್‌ಐ ರವರ ಸಾವಿನ ಸಂಬಂಧದಲ್ಲಿ ಸಿಐಡಿಯಿಂದ ನಡೆಸಲಾದ ತನಿಖಾ ಹಂತದ ಕುರಿತು ಹೇಳಿಕೆ ಕೊಡುತ್ತಾರೆ, ಹೇಳಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀ ಮಲ್ಲಿಕಾರ್ಜುನ ಬಂಡೆ, ಪಿಎಸ್‌ಐ ರವರ ಸಾವಿನ ಸಂಬಂಧದಲ್ಲಿ ಸಿಐಡಿಯಿಂದ ನಡೆಸಲಾದ ತನಿಖಾ ಹಂತದ ಕುರಿತು ಹೇಳಿಕೆಯನ್ನು ಕೊಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ಓದಲಾರಂಭಿಸಿದರು)

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಹಲವು ಮಾನ್ಯ ಸದಸ್ಯರು ಪರಸ್ಪರ ಮಾತಿನಲ್ಲಿ ತೊಡಗಿದ್ದರು)

(ಗೊಂದಲ)

ಅಧ್ಯಕ್ಷರು: ಆಯಿತು. ನಿಮ್ಮ ಹೇಳಿಕೆಯನ್ನು ಟೇಬಲ್ ಮೇಲೆ ಇಟ್ಟುಬಿಡಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಆಯಿತು.

10. ಶ್ರೀ ಮಲ್ಲಿಕಾರ್ಜುನ ಬಂಡೆ, ಪಿಎಸ್ಐರವರ ಸಾವಿನ ಸಂಬಂಧದಲ್ಲಿ ಸಿಐಡಿಯಿಂದ ನಡೆಸಲಾದ ಸಿಐಡಿ ತನಿಖಾ ಹಂತದ ಕುರಿತು ಹೇಳಿಕೆ

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 08.01.2014 ರಂದು ಗುಲ್ಬರ್ಗ ನಗರದ ರೋಜಾ ಠಾಣೆ ಪ್ರಕರಣ ಸಂಖ್ಯೆ 02/2014 ಕಲಂ 353, 332, 307, 324, 302 ಭಾ.ದಂ.ಸಂ. ಮತ್ತು ಕಲಂ 25 ಭಾರತೀಯ ಆಯುಧ ಕಾಯ್ದೆ ಅನ್ವಯ ದಾಖಲಾದ ಈ ಪ್ರಕರಣವನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ, ಸಂ. OE 05 CID 2014 ದಿನಾಂಕ: 18.01.2014 ರನ್ವಯ ಸಿಐಡಿ ತನಿಖೆಗೆ ವಹಿಸಲಾಗಿದ್ದು, ಇದು ಸಿ.ಐ.ಡಿ. ಕಛೇರಿಯಲ್ಲಿ ದಿನಾಂಕ: 21.01.2004 ರಂದು ಸ್ವೀಕೃತವಾಗಿರುತ್ತದೆ.

ಈ ಪ್ರಕರಣದ ಪ್ರಥಮ ವರ್ತಮಾನ ವರದಿಯಂತೆ ಫಿರ್ಯಾದುದಾರ ಪಿ.ಎಸ್.ಐ(ಕಾ&ಸು) ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಶ್ರೀ ಮುರಳಿಯವರು, ಪಿ.ಎಸ್.ಐ. ಹೇಮಂತ್ ಕುಮಾರ್ ಮತ್ತು ಮಲ್ಲಿಕಾರ್ಜುನ ಬಂಡೆಯವರ ಜೊತೆ ಮುತ್ತೂಟ್ ಫೈನಾನ್ಸ್ ಡಕಾಯಿತಿ ಪ್ರಕರಣದ (Cr no-234/13 u/s 395 ಐ.ಪಿ.ಸಿ. r/w Arms Act of Chowk Police Station) ತನಿಖೆಗೆ ಸಂಬಂಧಿಸಿದಂತೆ ಕುಖ್ಯಾತ ರೌಡಿ ಮುನ್ನಾ ಇವರ ಕೈವಾಡವಿರುವ